

ಹೊಂದುತ್ತಿರುವ ಜೀವಿ ಎಂಬುದು ಶ್ರೀ ಅರವಿಂದರ ಸ್ಪಷ್ಟ ಅಭಿಪ್ರಾಯ. ತನ್ನ ದಿವ್ಯಪ್ರಕೃತಿಯನ್ನು ಪಡೆದು ಭೂಮಿಯ ಮೇಲೆ ದಿವ್ಯಜೀವನವನ್ನು ನಡೆಸಲು ಹಗಲಿರುಳು ಪರಿಶ್ರಮಿಸುತ್ತಿರುವ ಜೀವಿಯೇ ಮಾನವ ಎಂದು ಸ್ಪಷ್ಟವಾಗಿ ತಿಳಿದರೆ, ಶಿಕ್ಷಣಕ್ಷೇತ್ರದ ಮುಂದಿನ ಅಂತಿಮ ತತ್ತ್ವ ಮತ್ತು ಗುರಿಯು ಸಿದ್ಧವಾಗುತ್ತದೆ.

ಸದ್ಯಕ್ಕೆ ಪೃಥ್ವಿಯ ಮೇಲೆ ತನ್ನ ಸಾಧನೆಗಳಿಂದ ಮಾನವನು ಉತ್ತುಂಗದಲ್ಲಿರುವ ಜೀವಿ ಎನಿಸಿರಬಹುದು. ಆದರೆ ಹತ್ತಬೇಕಾದ ಮೆಟ್ಟಿಲುಗಳು, ಏರಬೇಕಾದ ಎತ್ತರಗಳು ಇನ್ನೂ ಇವೆ. ಪ್ರಕೃತಿ ಮಾತೆಯು ಮಾನವನಂತಹ ಅಪಕ್ವ, ಸೀಮಿತ ಮತ್ತು ಅಪರಿಪೂರ್ಣ ಜೀವಿಯ ನಿರ್ಮಾಣದೊಂದಿಗೆ ವಿರಮಿಸುವುದಿಲ್ಲ. ಮಾನವನ ಇಂದ್ರಿಯ ಸುಖ, ಆರ್ಥಿಕ ಪ್ರಗತಿ, ವೈಚಾರಿಕ ಸಾಮರ್ಥ್ಯ ಮತ್ತು ರಾಜಕೀಯ ಸಾಧನೆಗಳಿಗೆ ಮಾತ್ರ ಶಿಕ್ಷಣರಂಗವು ತನ್ನನ್ನು ತಾನು ಸೀಮಿತಗೊಳಿಸಿಕೊಳ್ಳುವಂತಿಲ್ಲ. ಇಂದ್ರಿಯಲೋಲುಪನೂ, ಹಣದ ದಾಸಾನುದಾಸನೂ ಆದ ವ್ಯಾಪಾರಿಬುದ್ಧಿಯ ಮಾನವನು ಇನ್ನೂ ಕೆಳಮಟ್ಟದ ಪ್ರಕೃತಿಯಲ್ಲಿ ಜೀವಿಸುತ್ತಿದ್ದಾನೆ. ಆರ್ಥಿಕ ಪ್ರಯೋಜನವಾದ ಮತ್ತು ವಿಜ್ಞಾನವಾದಗಳೂ ಕೂಡ ಮಾನವನ ಜೀವನದ ಚಿತ್ರಣವನ್ನು ಸಮಗ್ರಗೊಳಿಸುವುದಿಲ್ಲ. ಬುದ್ಧಿಯ ತರಬೇತಿಯಿಂದ ಮಾನವನು ಪರಿವರ್ತನೆ ಹೊಂದುವನು ಎಂದು ಅಂದುಕೊಂಡಿದ್ದ ಆಶಯ, ಹಂಬಲಗಳು ಇಂದು ಅಪ್ಪಟ ಸುಳ್ಳೆಂದು ಸಾಬೀತಾಗಿದೆ ಎನ್ನುತ್ತಾರೆ ಶ್ರೀ ಅರವಿಂದರು.

ಹಾಗಾದರೆ ಮುಂದಿನ ಹಾದಿ ಯಾವುದು? ಮಾನವ ಬದುಕಿನ ಗೊತ್ತುಗುರಿಯೇನು? ಆಧುನಿಕ ಕಾಲದ ಶಿಕ್ಷಣರಂಗವು ಯಶಸ್ಸನ್ನು ಕಾಣಬೇಕಾದರೆ ಅದು ತನ್ನ ಮಾನದಂಡಗಳು ಮತ್ತು ತತ್ತ್ವಗಳನ್ನೇ ವಿಶಾಲಗೊಳಿಸಿಕೊಳ್ಳದೆ ಬೇರೆ ದಾರಿಯಿಲ್ಲ.

ಮೊದಲ ಹೆಜ್ಜೆಯೇ ತಪ್ಪಿರುವಾಗ ಕೊನೆಯಲ್ಲಿ ಸೋಲು, ನಿರಾಶೆ, ವೈಫಲ್ಯ, ಭ್ರಮನಿರಸನವು ಕಟ್ಟಿಟ್ಟ ಬುತ್ತಿ.

ಅದಕ್ಕಾಗಿ ನಾವು ಗಮನಿಸಬೇಕಾದ ಮೂಲತತ್ತ್ವಗಳೇನು?

- ಮಾನವನ ಜೀವಚೈತನ್ಯ(soul)ವು ಆಧ್ಯಾತ್ಮಿಕ ಅಮರತೆಯ ಹಂಬಲದಿಂದ ತುಡಿಯುತ್ತಿದೆ; ಪೂರ್ಣ ವಿಕಾಸದ ಅಭೀಪ್ಸೆಯನ್ನು ಹೊಂದಿದೆ.

- ತನ್ನ ಎಲ್ಲಾ ಮಿತಿಗಳನ್ನೂ ಮೀರಿ ಆತ್ಮದ ಪರಿಪೂರ್ಣತೆಯ ಸಿದ್ಧಿಯನ್ನು ಪಡೆಯುವುದು ಮಾನವ ಪ್ರಯತ್ನಗಳ ಗುರಿಯಾಗಿದೆ.

- ಬಾಹ್ಯ ಶಕ್ತಿ, ಅಧಿಕಾರ ಮತ್ತು ಸುಖಗಳಿಗಿಂತ ಆಧ್ಯಾತ್ಮಿಕ ಜೀವನವು ಹೆಚ್ಚು ಘನವಾದದ್ದು ಮತ್ತು ಶ್ರೇಷ್ಠವಾದದ್ದು.

- ಚಿಂತಕ ಒಬ್ಬ ಕರ್ಮನಿರತ ವ್ಯಕ್ತಿಗಿಂತ ಉತ್ತಮ.

- ಆದರೆ ಆಧ್ಯಾತ್ಮಿಕ ಪುರುಷನು ಚಿಂತಕನಿಗಿಂತ ಉತ್ತಮನು.

- ಭಗವಂತನಲ್ಲಿ ಬಾಳುತ್ತಿರುವ ಜೀವವು ಬಹಿರಂಗದ ಮನಸ್ಸು ಮತ್ತು ಬಾಹ್ಯ ಆಕರ್ಷಣೆಗಳಲ್ಲಿ ಮಗ್ನವಾಗಿರುವ ಜೀವಕ್ಕಿಂತ ಹೆಚ್ಚು ಪರಿಪೂರ್ಣವಾಗಿರುವುದು.

- ನಿತ್ಯಸತ್ಯವಾದ ಪರಮಾತ್ಮನ ಸನಾತನ ಅಂಶವಾಗಿದೆ ಮಾನವನ ಆತ್ಮ. ಅದು ಸಾರದಲ್ಲಿ ಆ ಪರಾಸತ್ಯದೊಡನೆ ಒಂದಾಗಿದೆ. ಈ ಆತ್ಮವನ್ನು, ಈ ಜೀವಚೈತನ್ಯ(soul)ವನ್ನು ಮಾನವನು ಕಂಡುಕೊಳ್ಳುವುದು ಅತ್ಯಗತ್ಯವೂ, ಅನಿವಾರ್ಯವೂ ಆಗಿದೆ.

- ಈ ಉದ್ದೇಶಕ್ಕಾಗಿಯೇ ಮಾನವನು ಭೂಮಿಯ ಮೇಲಿದ್ದಾನೆ.

- ಅಹಂಕೇಂದ್ರಿತ ಕಾರಾಗೃಹದಿಂದ ಹೊರಗೆ ಬಂದು ಸಮಸ್ತ ಸೃಷ್ಟಿಯೊಡನೆ ಅವನ ಚೇತನವು ಒಂದಾಗಬೇಕಾಗಿದೆ.

- ಸಕಲ ಜೀವಿಗಳ ಹಿತಕ್ಕಾಗಿ ನಮ್ಮ ಆತ್ಮವು ದಿವ್ಯತೆಯ ಶಿಖರದಿಂದ ದಿವ್ಯಸ್ವಾತಂತ್ರ್ಯದೊಡಗೂಡಿ ಕರ್ಮನಿರತವಾಗಿ, ಮನುಕುಲದ ವಿಕಾಸ ಅಥವಾ ಪರಿಣಾಮಕ್ಕೆ ಆಧ್ಯಾತ್ಮಿಕವಾದ ನೆರವು ನೀಡುವುದರಲ್ಲಿಯೇ ಮಾನವ ಬದುಕಿನ ಸಾರ್ಥಕತೆ ಇದೆ.

ಈ ಮಹೋನ್ನತ ಗುರಿಗಳನ್ನು ಶಿಕ್ಷಣಕ್ಷೇತ್ರವು ತನ್ನ ಮುಂದಿರಿಸಿಕೊಂಡು ತನ್ನ ಕರ್ತವ್ಯಕರ್ಮದಲ್ಲಿ ನಿರತವಾದರೆ ಜ್ಯೋತಿರ್ಮಯವಾದ ಆಧ್ಯಾತ್ಮಿಕ ಭವಿತವ್ಯದೆಡೆಗೆ ನಾವು ಮುನ್ನಡೆಯುತ್ತೇವೆ ಎಂದು ನಿಸ್ಸಂದೇಹವಾಗಿ ಪ್ರತಿಪಾದಿಸುತ್ತದೆ, ಶ್ರೀ ಅರವಿಂದ ದರ್ಶನ. ಇಂದು ಆಧುನಿಕ ಚಿಂತನೆ ಮತ್ತು ಶೈಕ್ಷಣಿಕ ತತ್ತ್ವಗಳು ಸಾಗುತ್ತಿರುವ ದಾರಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಶ್ರೀ ಅರವಿಂದರ ವಿಚಾರಧಾರೆಯು ಅದಕ್ಕೆ ಪೂರಕವಾಗಿಯೇ ಇರುವುದನ್ನು ಕಾಣಬಹುದು.

## ನಿವೇದಿತಾ ಕಂಡಂತೆ ಸ್ವಾಮೀಜಿ

**ಸಂ**ಸಾರಬಂಧನದಿಂದ ಪಾರಾಗಿ ಎಂದು ಸ್ವಾಮೀಜಿ ಹೇಳಿದಾಗ ಯಾರೋ ಒಬ್ಬರು, ''ಹಿಂದೂಗಳಂತೆ ನಾನು ಸಂಸಾರದಿಂದ ಪಾರಾಗಲು ಇಚ್ಛಿಸಲಾರೆ'' ಎಂದರು. ''ಮುಕ್ತಿಯನ್ನು ಪಡೆಯುವುದಕ್ಕಿಂತ ನನಗೆ ಯಾವ ಕೆಲಸ ಇಷ್ಟವೋ ಅದನ್ನು ಮಾಡಲು ಪ್ರಪಂಚಕ್ಕೆ ಬರಲಾಸೆ'' ಎಂದರು. ಸ್ವಾಮೀಜಿ ತಕ್ಷಣ ಉತ್ತರವಿತ್ತರು: ''ಅದಕ್ಕೆ ಕಾರಣ, ನೀನು ಪ್ರಗತಿ ಎಂಬ ಭಾವದಿಂದ ಪಾರಾಗದೆ ಇರುವುದು. ಆದರೆ ಪರಿಸ್ಥಿತಿ ಏನೂ ಉತ್ತಮವಾಗುವುದಿಲ್ಲ. ಅವುಗಳಲ್ಲಿ ಮಾಡುವ ಬದಲಾವಣೆಗಳಿಂದ ನಾವು ಮೇಲಾಗುವವರು.''

ನಾವು ಆಲ್ಮೋರಾದಲ್ಲಿದ್ದಾಗ ಸ್ವಭಾವತಃ ಸ್ನೇಹಪರನಾದವನೊಬ್ಬನು ಸ್ವಾಮೀಜಿಯವರನ್ನು ಕರ್ಮದ ವಿಷಯವಾಗಿ ಪ್ರಶ್ನಿಸಲು ಬಂದನು. ಬಲಾಢ್ಯರು ಬಲಹೀನರನ್ನು ಸದೆಬಡಿಯುವುದನ್ನು ನೋಡುವ ಕರ್ಮ ನಮ್ಮದಾಗಿರುವಾಗ ಏನು ಮಾಡಬೇಕು ಎಂದು ಕೇಳಿದನು. ಸ್ವಾಮೀಜಿ ಕೋಪದಿಂದ ಅವನ ಕಡೆ ತಿರುಗಿ ಹೀಗೆ ಹೇಳಿದರು : ''ಏತಕ್ಕೆ? ಬಲಾಢ್ಯನನ್ನು ಸದೆ ಬಡಿಯಬೇಕು! ಈ ಕರ್ಮದಲ್ಲಿ ನಿನ್ನ ಪಾತ್ರದ ಕೆಲಸವನ್ನೇ ನೀನು ಮರೆತಿರುವೆ. ದಂಗೆ ಏಳಲು ನಿನಗೆ ಯಾವಾಗಲೂ ಅಧಿಕಾರವಿದೆ.''

*– ಸೋದರಿ ನಿವೇದಿತಾ ('ನಾ ಕಂಡಂತೆ ನನ್ನ ಗುರುದೇವ', ಪು.೭೮)*

# ‘ಅನ್ಯಥಾ ಶರಣಂ ನಾಸ್ತಿ..’

## ಶರಣಾಗತಿಯ ವೈಭವ

**ಭಾಗ-೨**

- ಶಶಿಕಲಾ ಶ್ರೀಧರ್

*(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)*

### ೬. ಕಾರ್ಪಣ್ಯ :

ಷಡ್ವಿಧಗಳ ಶರಣಾಗತಿಯಲ್ಲಿ ಆರನೆಯದು ಹಾಗೂ ಕೊನೆಯದು ಕಾರ್ಪಣ್ಯ. ಕಾರ್ಪಣ್ಯವೆಂದರೆ ದೈನ್ಯತೆ. ಮಹಾದಾನಿಯಾದ ಭಗವಂತನ ಮುಂದೆ ‘ನಾನು ಅತ್ಯಂತ ದೀನ’ ಎಂಬ ಭಾವ. ಇಂತಹ ದೀನರನ್ನು ರಕ್ಷಿಸುವ ಪರಮಾತ್ಮನನ್ನು ದೀನರಕ್ಷಕ, ದೀನವತ್ಸಲ, ದೀನಾನುಕಂಪಿ ಎಂದು ಕರೆಯುತ್ತಾರೆ.

ಶ್ರೀ ಕನಕದಾಸರು ತಮ್ಮ ಹರಿಭಕ್ತಿಸಾರದಲ್ಲಿ,

**ದೀನ ನಾನು ಸಮಸ್ತಲೋಕಕೆ**
**ದಾನಿ ನೀನು ವಿಚಾರಿಸಲು ಮತಿ**
**ಹೀನ ನಾನು ಮಹಾಮಹಿಮ ವೈಕುಂಠಪತಿ ನೀನು ।**
**ಏನ ಬಲ್ಲೆನು ನಾನು ನೆರೆ ಸು-**
**ಜ್ಞಾನ ಮೂರುತಿ ನೀನು ನಿನ್ನ ಸ-**
**ಮಾನರುಂಟೇ ದೇವ ರಕ್ಷಿಸು ನಮ್ಮನನವರತ ॥**



- ಎಂದು ಪ್ರಾರ್ಥಿಸಿದ್ದಾರೆ.


ಹೀಗೆ ಶರಣಾದವನು ಪ್ರತಿದಿನವೂ ಪರಮಾತ್ಮನ ಮುಂದೆ ತಾನು ಮಾಡಿರುವ ತಪ್ಪುಗಳನ್ನು ಒಪ್ಪಿಸುತ್ತಾ, ಹಳೆಯ ಪಾಪಗಳನ್ನು ಕಳೆದುಕೊಂಡು, ಹೊಸ ಪಾಪಗಳಾಗದಂತೆ ಎಚ್ಚರ ವಹಿಸಿ ಪ್ರಾರಬ್ಧವನ್ನು ಅನುಭವಿಸುತ್ತಾ ದಿನ ಕಳೆಯುತ್ತಾನೆ. ಈ ಕಾರ್ಪಣ್ಯ ಭಾವದ ಭಕ್ತ ದೀನನಾಗಿ ಪರಮಾತ್ಮನನ್ನು ಸಂಪೂರ್ಣವಾಗಿ ಅವಲಂಬಿಸುತ್ತಾನೆ. ‘‘ನಾನು ಅತ್ಯಂತ ಬಡವ, ನೀನಾದರೋ ಕೊಡುಗೈ ದಾನಿ, ನನಗೆ ಬೇರೇನೂ ಬೇಡ, ಕೇವಲ ನಿನ್ನಲ್ಲಿ ದೃಢ ಭಕ್ತಿಯನ್ನು ಕರುಣಿಸು’’ ಎಂದು ಶ್ರೀ ಪುರಂದರದಾಸರು ಪ್ರಾರ್ಥಿಸಿದರೆ, ಶ್ರೀ ಕನಕದಾಸರು, ‘‘ಏನೆಂದು ಕೊಂಡಾಡಿ ಸ್ತುತಿಸಲೋ ದೇವ, ನಿನ್ನ ಮಹಿಮೆಗಳ ನಾನೇನು ಬಲ್ಲೆ? ನರಜನುಮ ಹುಳು ನಾನು, ಹರಿ ಮುಕುಂದ ನೀನು. ನಾನು ಮಹಾಪಾಪಿ; ನೀನಾದರೋ ಪರಮ ಪಾವನ ಮೂರ್ತಿ, ಬ್ರಹ್ಮನನ್ನೇ ಹುಟ್ಟಿಸಿದ ವೈಕುಂಠಪತಿ. ನಾನಾದರೋ ಅನಿತ್ಯವಾದ ತನುವನ್ನು ಹೊತ್ತಿರುವ ಗೊಂಬೆ’’ ಎಂದು ಅತ್ಯಂತ ದೈನ್ಯದಿಂದ ಪ್ರಾರ್ಥಿಸುತ್ತಾರೆ.

ನಮ್ಮ ತಪ್ಪುಗಳನ್ನು ಕುಂದುಕೊರತೆಗಳನ್ನು ಎಲ್ಲವನ್ನೂ ಭಗವಂತನಲ್ಲಿ ವಿಜ್ಞಾಪಿಸಿಕೊಳ್ಳಬೇಕು. ಅರ್ಜುನ ಶ್ರೀ ಕೃಷ್ಣನನ್ನು ಪ್ರಾರ್ಥಿಸುತ್ತಾ **‘ಕಾರ್ಪಣ್ಯದೋಷೋಽಪಹತ ಸ್ವಭಾವಃ’** ಎಂದು ತನ್ನ ಶೋಕವನ್ನು ಪ್ರಕಟಿಸುತ್ತಾ, ತನಗೆ ಯಾವುದು ಹಿತಕರ ಎಂಬುದನ್ನು ನಿಶ್ಚಯಿಸಿ ಹೇಳಲು ಪ್ರಾರ್ಥಿಸುತ್ತಾ, ‘‘ನಾನು ನಿನ್ನ ಶಿಷ್ಯ, ನಿನಗೆ ಶರಣು ಬಂದವನು, ನಾನು ಏನು ಮಾಡಬೇಕೆಂಬುದನ್ನು ಆಜ್ಞಾಪಿಸು’’ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತಾನೆ.

**ಶರಣಾಗತಿ ಶಾಸ್ತ್ರ ಶ್ರೀಮದ್ರಾಮಾಯಣ:** ಶ್ರೀ ವಾಲ್ಮೀಕಿ ಮಹರ್ಷಿಗಳು ಭಗವಂತನಲ್ಲಿ ಶರಣಾಗುವುದರಿಂದ ಎಲ್ಲ ಪಾಪಗಳಿಂದಲೂ ಬಿಡುಗಡೆ ಹೊಂದಿ, ಮೋಕ್ಷ ಸಾಮ್ರಾಜ್ಯವನ್ನು ಸುಲಭವಾಗಿ ಪಡೆಯಬಹುದು ಎಂದು *ರಾಮಾಯಣ ಮಹಾಕಾವ್ಯ*ದಲ್ಲಿ ಸಾಧನೋಪಾಯವನ್ನು ತಿಳಿಸುತ್ತಾರೆ. ದೋಷಯುಕ್ತರಾದರೂ ಭಗವಂತನಲ್ಲಿ ಶರಣು ಹೋಗುವುದರಿಂದ ಮೋಕ್ಷವು ಲಭಿಸುವುದು ಎಂದು ನಿರೂಪಿಸುತ್ತಾರೆ.

ಈ ಶರಣಾಗತಿಯ ವೈಭವ ರಾಮಾಯಣದ ಪ್ರತಿಯೊಂದು ಕಾಂಡದಲ್ಲೂ ಬೆಳಗುತ್ತಿದೆ.

***ಬಾಲಕಾಂಡ :*** ಬ್ರಹ್ಮದೇವರ ವರದಿಂದ ಉನ್ಮತ್ತನೂ ದುರಹಂಕಾರಿಯೂ ಆಗಿದ್ದ ರಾಕ್ಷಸರಾಜ ರಾವಣನ ಉಪಟಳವನ್ನು ಸಹಿಸದ



ಭೂಲೋಕದ ಸಾಧುಜನರೂ ದೇವಲೋಕದ ದೇವತೆಗಳೂ ಮಹಾವಿಷ್ಣುವನ್ನು ಪರಿಪರಿಯಾಗಿ ಪ್ರಾರ್ಥಿಸುತ್ತಾರೆ –

**ತ್ವಂ ಗತಿಃ ಪರಮಾ ದೇವ ಸರ್ವೇಷಾಂ ನಃ ಪರಂತಪಃ ।**
**ವಧಾಯ ದೇವಶತ್ರೂಣಾಂ ನೃಣಾಂ ಲೋಕೇ ಮನಃ ಕುರು॥**

*(ವಾಲ್ಮೀಕಿ ರಾಮಾಯಣ, ೧೫-೨೫)*

'ಪ್ರಭು, ನಾವೆಲ್ಲರೂ ನಿನ್ನನ್ನೇ ರಕ್ಷಕನೆಂದು ನಂಬಿರುತ್ತೇವೆ. ನಮ್ಮೆಲ್ಲರಿಗೂ ನೀನೇ ಶರಣ್ಯನು. ಶರಣಾಗತ ರಕ್ಷಕನೇ! ನಿನ್ನನ್ನು ಬಿಡು ಬೇರೆ ಯಾರೂ ನಮಗೆ ರಕ್ಷಕರಿಲ್ಲ. ಶತ್ರುಗಳಿಗೆ ತಾಪವನ್ನು ಉಂಟುಮಾಡುವ ಮಹಾವಿಷ್ಣುವೇ ರಾವಣಾದಿ ರಾಕ್ಷಸರ ಸಂಹಾರಕ್ಕಾಗಿ ಭೂಲೋಕದಲ್ಲಿ ಅವತರಿಸುವ ಕೃಪೆ ಮಾಡಬೇಕು' ಎಂದು ಪ್ರಾರ್ಥಿಸಿದಾಗ ಶರಣಾಗತ ಧರ್ಮವನ್ನವಲಂಬಿಸಿ ನಿಂತಿದ್ದ ದೇವತೆಗಳನ್ನು ಕುರಿತು ಶ್ರೀಮನ್ನಾರಾಯಣನು ಹೀಗನ್ನುತ್ತಾನೆ:

**ಸಪುತ್ರ ಪೌತ್ರಂ ಸಾಮಾತ್ಯಂ ಸಮಿತ್ರ ಜ್ಞಾತಿ ಬಾಂಧವಂ ।**
**ಹತ್ವಾ ಕ್ರೂರಂ ದುರಾತ್ಮಾನಂ ದೇವರ್ಷೀಣಾಂ ಭಯಾವಹಮ್ ॥**
**ದಶ ವರ್ಷ ಸಹಸ್ರಾಣಿ ದಶವರ್ಷಶತಾನಿ ಚ ।**
**ವತ್ಸ್ಯಾಮಿ ಮಾನುಷೇ ಲೋಕೇ ಪಾಲಯನ್ ಪೃಥಿವೀಮಿಮಾಮ್॥**

*(ಅಲ್ಲೇ, ೧೫.೨೭-೨೯)*

'ದೇವತೆಗಳೇ, ಇನ್ನು ಮುಂದೆ ನೀವು ಭಯಪಡಲು ಕಾರಣವಿಲ್ಲ. ಋಷಿಗಳಿಗೂ ನಿಮಗೂ ಭಯವನ್ನುಂಟುಮಾಡುತ್ತಿರುವ ಮಹಾಕ್ರೂರಿಯೂ ದುರಭಿಮಾನಿಯೂ ಆದ ರಾವಣನನ್ನು ಅವನ ಕುಟುಂಬ ಸಮೇತ ಸಂಹರಿಸಿ, ಭೂಲೋಕದಲ್ಲಿ ಬಹುಕಾಲ ವಾಸವಿದ್ದು ಅದನ್ನು ಸಂರಕ್ಷಿಸುತ್ತೇನೆ' ಎಂದು ಅಭಯ ನೀಡುತ್ತಾನೆ.

***ಅಯೋಧ್ಯಾ ಕಾಂಡ*** ದಲ್ಲಿ ಪಿತೃವಾಕ್ಯವನ್ನು ಪರಿಪಾಲಿಸಲು ಶ್ರೀರಾಮನು ರಾಜ್ಯವನ್ನು ತೊರೆದು ವನವಾಸ ಮಾಡುತ್ತಿದ್ದಾಗ ಆ ಸ್ವಾಮಿಯ ಅನುಜ, ಭಕ್ತಿಭರಿತ ಭರತ ತನ್ನ ಅಣ್ಣನನ್ನು ಅರಸುತ್ತಾ ಬಂದು ಚಿತ್ರಕೂಟದಲ್ಲಿ ಶ್ರೀರಾಮನನ್ನು ಸಂಧಿಸುತ್ತಾನೆ. ರಾಮನನ್ನು ನೋಡುತ್ತಲೇ ಭಕ್ತಿ ಪ್ರೇಮ ತುಂಬಿ ಮಾತೇ ಹೊರಡದೆ ಸುಮ್ಮನೆ 'ಆರ್ಯ, ಆರ್ಯ' ಎನ್ನುತ್ತಾನೆ ಭರತ. ರಾಮನು ತಮ್ಮನನ್ನು ಪ್ರೇಮದಿಂದ ಆಲಿಂಗಿಸಿ ಸಮಾಧಾನ ಪಡಿಸುತ್ತಾನೆ. ಭರತನು ರಾಮನನ್ನು ಕುರಿತು ಹೇಳುತ್ತಾನೆ:

**ಶಿರಸಾ ತ್ವಾ ಭಿಯಾಚೇಹಂ ಕುರುಷ್ವ ಕರುಣಾಂ ಮಯಿ ।**
**ಬಾಂಧವೇಷು ಚ ಸರ್ವೇಷು ಭೂತೇಷ್ವಿವ ಮಹೇಶ್ವರಃ ॥**

*(ರಾಮಾಯಣ, ಅಯೋಧ್ಯಾ ಕಾಂಡ, ೧೦೭ - ೩೧)*

'ಅಣ್ಣಾ , ತಲೆಬಾಗಿ ನಮಸ್ಕರಿಸಿ ಬೇಡಿಕೊಳ್ಳುತ್ತೇನೆ, ನನ್ನ ವಿಷಯದಲ್ಲಿ ದಯೆತೋರು. ಮಹೇಶ್ವರನು ಪ್ರಾಣಿಗಳ ವಿಷಯದಲ್ಲಿ ದಯೆ ತೋರುವಂತೆ ಎಲ್ಲ ಬಾಂಧವರ ವಿಷಯದಲ್ಲಿಯೂ ನೀನು ಕರುಣೆಯನ್ನು ತೋರು' ಎಂದು ಅಯೋಧ್ಯೆಗೆ ಹಿಂದಿರುಗಲು ಪರಿಪರಿಯಾಗಿ ಪ್ರಾರ್ಥಿಸುತ್ತಾನೆ. ಕ್ಷಣಕ್ಷಣಕ್ಕೂ ಶ್ರೀರಾಮನ ಪಾದಗಳಿಗೆ ವಂದಿಸಿ ಅಂಗಲಾಚಿ ಬೇಡಿಕೊಳ್ಳುತ್ತಾನೆ. ಆದರೆ ಮಹಾಸತ್ತ್ವಶಾಲಿಯಾದ ಶ್ರೀರಾಮನು ತಂದೆಯ ಆಜ್ಞೆಯನ್ನು ಸ್ಥಿರವಾಗಿ ಅವಲಂಬಿಸಿ, ಹದಿನಾಲ್ಕು ವರ್ಷಗಳ ಕಾಲ ಅರಣ್ಯವಾಸ ಮಾಡಿ ಅನಂತರ ಅಯೋಧ್ಯೆಗೆ ಹಿಂದಿರುಗುವುದಾಗಿಯೂ ಅದುವರೆಗೂ ಭರತನೇ ರಾಜನಾಗಿ ಅಯೋಧ್ಯೆಯನ್ನಾಳಬೇಕೆಂದೂ ಹೇಳುತ್ತಾನೆ. ತನ್ನ ಪ್ರಾರ್ಥನೆ ಎಲ್ಲವೂ ವಿಫಲವಾಗಲು, ಭರತನು ಕಡೆಯದಾಗಿ ಶ್ರೀರಾಮನ ಮುಂದೆ ದಿವ್ಯವಾದ ಎರಡು ಪಾದುಕೆಗಳನ್ನಿಟ್ಟು ಅವುಗಳನ್ನು ಅನುಗ್ರಹಿಸಿಕೊಡಲು ಪ್ರಾರ್ಥಿಸುತ್ತಾನೆ. ಶ್ರೀರಾಮ ಆ ಪಾದುಕೆಗಳನ್ನು ತನ್ನ ಪಾದಾರವಿಂದಗಳಲ್ಲಿ ಅಲಂಕರಿಸಿ, ಅನಂತರ ಭರತನಿಗೆ ದಯಪಾಲಿಸಿದಾಗ ಭರತನು ಶ್ರೀರಾಮನಿಗೂ ಪಾದುಕೆಗಳಿಗೂ ದೀರ್ಘದಂಡ ನಮಸ್ಕಾರ ಮಾಡಿ, ಆ ಪಾದುಕೆಗಳನ್ನೇ ರಾಜ ಸಿಂಹಾಸನದಲ್ಲಿರಿಸಿ, ತಾನು ಅದರ ಪ್ರತಿನಿಧಿಯಾಗಿ ರಾಜ್ಯಭಾರ ಮಾಡುವುದಾಗಿ ಅದ್ಭುತವಾದ ಶರಣಾಗತಿಯನ್ನು ತೋರುತ್ತಾನೆ. ಲೋಕದಲ್ಲಿ ಇತರ ರಾಜರು ತಮ್ಮ ಶಿರಸ್ಸಿನ ಮೇಲೆ ಒಂದು ಕಿರೀಟವನ್ನು ಮಾತ್ರ ಧರಿಸಿದರೆ, ಭರತನು ಶ್ರೀರಾಮನ ಹೇಮಭೂಷಿತ ವಾದ ಎರಡು ಮಣಿಪಾದುಕೆಗಳನ್ನು ಎರಡು ರತ್ನ ಕಿರೀಟಗಳಂತೆ ಶಿರಸ್ಸಿನಲ್ಲಿ ಧರಿಸಿ ಬೆಳಗಿದ!

***ಅರಣ್ಯ ಕಾಂಡ*** ದಲ್ಲಿ ದಂಡಕಾರಣ್ಯದ ತಪೋನಿರತರಾದ ಋಷಿಗಳೆಲ್ಲರೂ ರಾಕ್ಷಸರ ಬಾಧೆಯನ್ನು ತಡೆಯಲಾಗದೆ ಶ್ರೀರಾಮನಲ್ಲಿ ಶರಣಾಗಿ ಮೊರೆಯಿಡುತ್ತಾರೆ:

**ಸೋಽಯಂ ಬ್ರಾಹ್ಮಣ ಭೂಯಿಷ್ಠೋ ವಾನಪ್ರಸ್ಥಗಣೋ ಮಹಾನ್।**
**ತ್ವನ್ನಾಥೋಽನಾಥವದ್ರಾಮ ರಾಕ್ಷಸೈರ್ಹನ್ಯತೇ ಭೃಶಮ್॥**

*(ರಾಮಾಯಣ, ಅರಣ್ಯ ಕಾಂಡ, ೨ ನೇ ಸರ್ಗ, ಶ್ಲೋಕ ೧೫)*

'ಬ್ರಾಹ್ಮಣರಿಂದ ಸಮೃದ್ಧವಾಗಿರುವ ವಾನಪ್ರಸ್ಥಾಶ್ರಮಿಗಳ ಈ ಮಹಾಸಮೂಹವು ನಿನ್ನನ್ನೇ ನಾಥನನ್ನಾಗಿ ಪಡೆದಿದ್ದರೂ ನಾಥನೇ ಇಲ್ಲದಂತೆ ರಾಕ್ಷಸರಿಂದ ವಿನಾಶಗೊಳಿಸಲ್ಪಡುತ್ತಿದೆ.'

ಭಯಂಕರ ಕರ್ಮರಾದ ರಾಕ್ಷಸರು, ತಪೋನಿರತರಾದ ಮುನಿಗಳೆಲ್ಲರಿಗೂ ಉಪಟಳವನ್ನು ಕೊಡುತ್ತಾ ಘೋರವಾದ ಹಿಂಸೆಯನ್ನು ಕೊಡುತ್ತಾ, ಧ್ಯಾನಾಸಕ್ತರಾಗಿದ್ದ ಅನೇಕ ಮುನಿಗಳನ್ನು ಕೊಂದು ಹಾಕುತ್ತಿದ್ದರು. ಈ ಯಾತನೆಗಳನ್ನು ಸಹಿಸದ ಋಷಿಗಳು ಗುಂಪು ಗುಂಪಾಗಿ ಶ್ರೀರಾಮನ ಬಳಿ ಬಂದು,

**ತತಸ್ತ್ವಾಂ ಶರಣಾರ್ಥಂ ಚ ಶರಣ್ಯಂ ಸಮುಪಸ್ಥಿತಾಃ ।**
**ಪರಿಪಾಲಯ ನೋ ರಾಮ ವಧಮಾನಾನ್ನಿಶಾಚರೈಃ ॥**
**ಪರಾ ತ್ವತ್ತೋ ಗತಿರ್ವೀರ ಪೃಥಿವ್ಯಾಂ ನೋಪಪದ್ಯತೇ ।**
**ಪರಿಪಾಲಯ ನಃ ಸರ್ವಾನ್ರಾಕ್ಷಸೇಭ್ಯೋ ನೃಪಾತ್ಮಜ ॥**
*(ರಾಮಾಯಣ, ಅರಣ್ಯಕಾಂಡ, ೬ನೆಯ ಸರ್ಗ, ೧೯-೨೦)*

‘ಅನನ್ಯ ಶರಣ್ಯನಾದ ನಿನ್ನನ್ನು ರಕ್ಷಣಾರ್ಥವಾಗಿ ಪ್ರಾರ್ಥಿಸಲು ಬಂದಿರುವೆವು. ನಿಶಾಚರರಿಂದ ಹಿಂಸಿಸಲ್ಪಡುತ್ತಿರುವ ನಮ್ಮನ್ನು ರಕ್ಷಿಸು. ರಾಜಕುಮಾರ! ಈ ಭೂಮಂಡಲದಲ್ಲಿ ನಮ್ಮನ್ನು ರಕ್ಷಿಸಲು ನಿನ್ನೊಬ್ಬನನ್ನು ಬಿಟ್ಟರೆ ಬೇರೆ ಯಾರೂ ನಮಗೆ ರಕ್ಷಕರೇ ಇಲ್ಲ. ಆದುದರಿಂದ ನಮ್ಮೆಲ್ಲರನ್ನೂ ರಾಕ್ಷಸರಿಂದ ಸಂರಕ್ಷಿಸು’ ಎಂದು ಪ್ರಾರ್ಥಿಸುತ್ತಾರೆ.

ಆಗ ಧರ್ಮಾತ್ಮನಾದ ಶ್ರೀರಾಮನು ತಪಸ್ವಿಗಳ ಪ್ರಾರ್ಥನೆಯನ್ನು ಕೇಳಿ,

**ನೈವಮರ್ಹಥ ಮಾಂ ವಕ್ತುಂ ಆಜ್ಞಾಪ್ಯೋಽಹಂ ತಪಸ್ವಿನಾಮ್।**
**ಕೇವಲೇನಾತ್ಮ ಕಾರ್ಯೇಣ ಪ್ರವಿಷ್ಟೋಽಹಮಿದಂ ವನಮ್॥**
**ತಪಸ್ವಿನಾಂ ರಣೇ ಶತ್ರೂನ್ ಹಂತುಮಿಚ್ಛಾಮಿ ರಾಕ್ಷಸಾನ್ ।**

‘ಮಹರ್ಷಿಗಳೇ, ನೀವು ರಕ್ಷಣೆಗಾಗಿ ನನ್ನನ್ನು ಪ್ರಾರ್ಥಿಸುವುದು ಸರಿಯಲ್ಲ. ನೀವು ನನಗೆ ಆಜ್ಞಾಪಿಸಬೇಕು. ಯಾವಾಗಲೂ ನಾನು ತಪಸ್ವಿಗಳ ಆಜ್ಞಾಧಾರಕನಾಗಿರುವೆನು. ತಪಸ್ವಿಗಳ ಶತ್ರುಗಳನ್ನು ಯುದ್ಧದಲ್ಲಿ ಸಂಹರಿಸಲು ನಾನು ನಿರ್ಧರಿಸಿದ್ದೇನೆ’ ಎಂಬುದಾಗಿ ಎಲ್ಲ ತಪೋಧನರಿಗೂ ಅಭಯವನ್ನು ಕರುಣಿಸುತ್ತಾನೆ.

***ಕಿಷ್ಕಿಂಧಾಕಾಂಡ*** ದಲ್ಲಿ ವಾನರರಾಜನಾದ ಸುಗ್ರೀವನು ತನ್ನ ರಾಜ್ಯವನ್ನೂ, ಪತ್ನಿಯನ್ನೂ ಕಳೆದುಕೊಂಡು ಅಣ್ಣನಾದ ವಾಲಿಯ ವಂಚನೆ, ಉಪಟಳಗಳಿಂದ ಬಹಳವಾಗಿ ನೊಂದು ಶ್ರೀರಾಮನ ಸಖ್ಯವನ್ನು ಬೆಳೆಸಿದಾಗ,

**ಅಹಂ ವಿನಿಕೃತೋ ರಾಮ ಚರಾಮೀಹ ಭಯಾರ್ದಿತಃ ।**
**ಹೃತಭಾರ್ಯೋ ವನೇ ತ್ರಸ್ತೋ ದುರ್ಗಮೇತದುಪಾಶ್ರಿತಃ ॥**
**ವಾಲಿನೋ ಮೇ ಮಹಾಭಾಗ ಭಯಾರ್ತಸ್ಯಾಭಯಂ ಕುರು ।**
**ಕರ್ತುಮರ್ಹಸಿ ಕಾಕುತ್ಸ್ಥ ಭಯಂ ಮೇ ನ ಭವೇದ್ಯಥಾ ॥**
*(ರಾಮಾಯಣ, ಕಿಷ್ಕಿಂಧಾಕಾಂಡ, ಸರ್ಗ ೫, ೨೨-೨೪)*

‘ರಾಮ, ನಾನು ನನ್ನ ಅಣ್ಣನಾದ ವಾಲಿಯಿಂದ ಓಡಿಸಲ್ಪಟ್ಟು ಹೆಂಡತಿಯನ್ನು ಕಳೆದುಕೊಂಡು ಭಯಪೀಡಿತನಾಗಿ ಈ ಅರಣ್ಯದಲ್ಲಿ ತಿರುಗಾಡುತ್ತಿದ್ದೇನೆ. ಉದ್ವಿಗ್ನಚಿತ್ತನಾಗಿರುವ ನಾನು ಈ ದುರ್ಗವನ್ನು ಆಶ್ರಯಿಸಿದ್ದೇನೆ. ವಾಲಿಯ ಭಯದಿಂದ ಪೀಡಿತನಾಗಿರುವ ನನಗೆ ಅಭಯದಾನ ಮಾಡು, ನನ್ನ ಭಯವನ್ನು ನಿವಾರಿಸುವುದು ನಿನಗೆ ಉಚಿತವಾಗಿದೆ’ ಎಂದು ಪ್ರಾರ್ಥಿಸಿದಾಗ ಶ್ರೀ ರಾಮಚಂದ್ರನು ಹೀಗೆನ್ನುತ್ತಾನೆ:

**ಉಪಕಾರಫಲಂ ಮಿತ್ರಂ ವಿದಿತಂ ಮೇ ಮಹಾಕಪೇ ।**
**ವಾಲಿನಂ ತಂ ವಧಿಷ್ಯಾಮಿ ತವ ಭಾರ್ಯಾಪಹಾರಿಣಂ ॥**

‘ಮಹಾಕಪಿಯೇ, ಗೆಳೆತನಕ್ಕೆ ಉಪಕಾರವೇ ಫಲವೆಂಬುದನ್ನು ನಾನು ತಿಳಿದಿರುತ್ತೇನೆ. ನಿನ್ನ ಪತ್ನಿಯನ್ನು ಅಪಹರಿಸಿರುವ ವಾಲಿಯನ್ನು ನಾನು ಸಂಹರಿಸುತ್ತೇನೆ’ ಎಂದು ಅಭಯ ನೀಡುತ್ತಾನೆ. ವಾಲಿಯ ಸಂಹಾರದ ನಂತರ ಸುಗ್ರೀವನು ರಾಜ್ಯವನ್ನು ತನ್ನ ಪತ್ನಿಯನ್ನೂ ಮರಳಿ ಪಡೆದು ಸುಖಿಸುತ್ತಾನೆ. ಇದು ಶ್ರೀರಾಮನಿಗೆ ಸುಗ್ರೀವನು ಶರಣಾದುದರ ಫಲ!


***ಸುಂದರಕಾಂಡ*** ದಲ್ಲಿ ದೇವೇಂದ್ರನ ಮಗನಾದ ಜಯಂತನು ಕಾಗೆಯ ರೂಪದಲ್ಲಿ ವಿಹರಿಸುತ್ತಿದ್ದಾಗ, ಶ್ರೀರಾಮನನ್ನು ಮಡಿಲ ಮೇಲೆ ಮಲಗಿಸಿಕೊಂಡಿದ್ದ ಸೀತೆಯನ್ನು ನೋಡಿ ಅವಳ ಬಳಿಗೆ ಹಾರಿಬಂದು ತನ್ನ ಕಾಲುಗುರುಗಳಿಂದ ಅವಳೆದೆಯನ್ನು ಪರಚಿ, ಸೀಳಿ ಗಾಯ ಮಾಡಿತು. ಅದರಿಂದ ರಕ್ತ ತೊಟ್ಟಿಕ್ಕಿದಾಗ ಶ್ರೀರಾಮನಿಗೆ ಎಚ್ಚರವಾಗಿ, ಸೀತೆಯನ್ನು ಕುಕ್ಕುತ್ತಿದ್ದ ಕಾಗೆಯನ್ನು ನೋಡಿದ. ಅವನು ವಿಷಸರ್ಪದಂತೆ ಕೋಪಗೊಂಡು, ಅಲ್ಲಿಯೇ ಇದ್ದ ಒಂದು ದರ್ಭೆಯನ್ನು ಕೈಗೆತ್ತಿಕೊಂಡು ಬ್ರಹ್ಮಾಸ್ತ್ರವನ್ನು ಅಭಿಮಂತ್ರಿಸಿ ಪ್ರಯೋಗಿಸಿದಾಗ, ಕಾಗೆಯು ಭಯದಿಂದ ಆಕಾಶದೆಡೆಗೆ ವೇಗವಾಗಿ ಹಾರತೊಡಗಿತು. ಆದರೆ ತನ್ನನ್ನೇ ಹಿಂಬಾಲಿಸಿ ಬರುತ್ತಿದ್ದ ಬ್ರಹ್ಮಾಸ್ತ್ರದಿಂದ ಕಾಪಾಡಲು ಯಾರಿಂದಲೂ ಸಾಧ್ಯವಾಗದಾಗ ಮರಳಿ ಭೂಲೋಕಕ್ಕೆ ಬಂದು ಶ್ರೀರಾಮನಲ್ಲೇ ಶರಣಾಯಿತು. ಶರಣಾಗತ ರಕ್ಷಕನಾದ ಶ್ರೀರಾಮನು ಶರಣಾಗತನಾಗಿ ತನ್ನ ಪಾದಗಳಿಗೆ ಎರಗಿದ್ದ ಕಾಗೆಯನ್ನು, ಅದು ವಧಿಸಲು ಅರ್ಹವೇ ಆಗಿದ್ದರೂ ಕೂಡ ಸಂರಕ್ಷಿಸಿದ. ತನ್ನ ಬಲಗಣ್ಣನ್ನು ಬಲಿಗೊಟ್ಟು ಕಾಗೆಯ ರೂಪದ ಜಯಂತನು ಪ್ರಾಣವನ್ನುಳಿಸಿಕೊಂಡನು. ಈ ಪ್ರಸಂಗವನ್ನು ಅಶೋಕವನದಲ್ಲಿ ರಾವಣನ ಸೆರೆಯಲ್ಲಿದ್ದ ಸೀತೆ ಹನುಮಂತನಿಗೆ ವಿವರಿಸುತ್ತಾಳೆ. ಈ ಪ್ರಸಂಗವನ್ನು ಶ್ರೀರಾಮನಿಗೇ ಸಂಬೋಧಿಸಿ ಹೇಳುತ್ತಾ ಸೀತೆ ಹೇಳುತ್ತಾಳೆ:

**ಸ ತಂ ನಿಪತಿತಂ ಭೂಮೌ ಶರಣ್ಯಃ ಶರಣಾಗತಮ್ ।**
**ವಧಾರ್ಹಮಪಿ ಕಾಕುತ್ಸ್ಥಃ ಕೃಪಯಾ ಪರ್ಯಪಾಲಯತ್ ॥**
*(ರಾಮಾಯಣ, ಸುಂದರಕಾಂಡ, ೩೮.೩೩)*

ಹೀಗೆ ಸೀತೆಗೆ ಮಹದಪಚಾರವನ್ನು ಎಸಗಿದ್ದ ಕಾಗೆಯು ಶ್ರೀರಾಮನಲ್ಲೇ ಶರಣಾಗತಿ ಹೊಂದಿದಾಗ, ಶರಣಾದವರನ್ನು ಕಾಪಾಡುವ ವ್ರತವುಳ್ಳ ಶ್ರೀರಾಮನು ಅದಕ್ಕೆ ಅಭಯ ನೀಡಿ ರಕ್ಷಿಸುತ್ತಾನೆ.







***ಯುದ್ಧಕಾಂಡ*** ದಲ್ಲಿ ರಾಕ್ಷಸ ಸಾರ್ವಭೌಮ ರಾವಣನ ತಮ್ಮನಾದ, ಧರ್ಮಾತ್ಮನೂ ಭಾಗವತ ಶಿರೋಮಣಿಯೂ ಆದ ವಿಭೀಷಣನು,

**ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ ।**
**ಸರ್ವಲೋಕ ಶರಣ್ಯಾಯ ರಾಘವಾಯ ಮಹಾತ್ಮನೇ ॥**
**ನಿವೇದಯತ ಮಾಂ ಕ್ಷಿಪ್ರಂ ।**

ಎಂದು ತನ್ನ ಹೆಂಡತಿ ಮಕ್ಕಳನ್ನು ಪರಿತ್ಯಜಿಸಿ ಬಂದಿರುವುದಾಗಿ ಹೇಳುತ್ತಾ, ಸಕಲಲೋಕಶರಣ್ಯನಾದ ರಾಘವನಿಗೆ ವಿಭೀಷಣನು ಶರಣಾಗತನಾಗಲು ಬಂದು ನಿಂತಿರುವನೆಂಬುದನ್ನು ಒಡನೆಯೆ ತಿಳಿಸಲು ವಾನರರನ್ನು ಪ್ರಾರ್ಥಿಸುತ್ತಾನೆ. ಶತ್ರುವೇ ಆಗಿದ್ದರೂ ಶರಣಾಗತನಾಗಿ ದೀನಭಾವದಿಂದ ಕೈಜೋಡಿಸಿಕೊಂಡು ದಯಾಯಾಚನೆ ಮಾಡಿದಾಗ ಅವನನ್ನು ರಕ್ಷಿಸಬೇಕೆಂಬ ಧರ್ಮವುಳ್ಳ ಶ್ರೀರಾಮಚಂದ್ರನು,

**ಸಕೃದೇವ ಪ್ರಪನ್ನಾಯ ತವಾಸ್ಮೀತಿ ಯ ಯಾಚತೇ ।**
**ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥**

*(ರಾಮಾಯಣ, ಯುದ್ಧಕಾಂಡ, ೧೮.೩೩)*

''ಯಾರೇ ಆದರೂ ಒಂದೇ ಒಂದು ಬಾರಿ ಶರಣಾಗತನಾಗಿ 'ಪ್ರಭುವೇ, ನಾನು ನಿನ್ನವನು ನನ್ನನ್ನು ರಕ್ಷಿಸು' ಎಂದು ಯಾಚಿಸುವನೋ ಅಂತಹವನಿಗೆ ಸಮಸ್ತ ಪ್ರಾಣಿಗಳ ದೆಸೆಯಿಂದಲೂ ಅಭಯವನ್ನು ನೀಡುತ್ತೇನೆ. ಇದು ನನ್ನ ವ್ರತ'' ಎಂದು ಹೇಳುವ ಪ್ರಸಂಗ ಅತ್ಯದ್ಭುತ ಹಾಗೂ ಸುಂದರ.

***ಉತ್ತರಕಾಂಡ***ದಲ್ಲಿ ಮಧು ಹಾಗೂ ಕುಂಭೀನಸಿಯ ಮಗನಾದ ಲವಣಾಸುರನು ಹುಟ್ಟಿನಿಂದಲೇ ದುಷ್ಟನಾಗಿದ್ದು ಯಾವಾಗಲೂ ಪಾಪಕಾರ್ಯಗಳನ್ನೇ ಮಾಡುತ್ತಿದ್ದನು. ಇದು ಸಾಲದು ಎಂಬಂತೆ ಇವನ ತಂದೆಗೆ ಪರಮೇಶ್ವರನಿಂದ ಕೊಡಲ್ಪಟ್ಟ ಶೂಲವು ಇದ್ದದ್ದರಿಂದ ಇವನು ಅವಧ್ಯನೇ ಆಗಿದ್ದನು. ಯಾವ ರಾಜನಿಂದಲೂ ಇವನ ಸಂಹಾರಕಾರ್ಯ ಸಾಧ್ಯವಾಗಿರಲಿಲ್ಲ. ಇವನು ಮೂರು ಲೋಕಗಳನ್ನೂ ಸಂತಾಪಪಡಿಸುತ್ತಾ, ವಿಶೇಷವಾಗಿ ತಪೋನಿರತರಾಗಿದ್ದ ಋಷಿ ಗಳನ್ನು ಬಹಳ ಹಿಂಸಿಸುತ್ತಿದ್ದರಿಂದ ಅವರೆಲ್ಲರೂ ಶ್ರೀರಾಮನ ಬಳಿ ಬಂದು ಪ್ರಾರ್ಥಿಸುತ್ತಾರೆ:

**ತ್ರಾತಾರಂ ವಿದ್ಮಹೇ ತಾತ ನಾನ್ಯಂ ಭುವಿ ನರಾಧಿಪಮ್ ।**
**ತತ್ಪರಿತ್ರಾತುಮಿಚ್ಛಾಮೋ ಲವಣಾದ್ಭಯಪೀಡಿತಾನ್ ॥**

*(ರಾಮಾಯಣ, ಉತ್ತರಕಾಂಡ, ೬೨.೬)*

'ಮಹರ್ಷಿಗಳೇ, ಖಂಡಿತವಾಗಿಯೂ ಆ ರಾಕ್ಷಸನನ್ನು ನಾನು ಸಂಹರಿಸುತ್ತೇನೆ. ಹೃದಯದಿಂದ ನಿಮ್ಮ ಭಯವು ಇಂದೇ ದೂರವಾಗಲಿ' ಎಂಬುದಾಗಿ ಪ್ರತಿಜ್ಞೆ ಮಾಡಿ ಶತ್ರುಘ್ನನಿಗೆ ದಿವ್ಯಾಸ್ತ್ರವನ್ನು ಕರುಣಿಸಿ ಲವಣಾಸುರನನ್ನು ಸಂಹಾರ ಮಾಡುವಂತೆ ಆಜ್ಞಾಪಿಸುತ್ತಾನೆ.

ಹೀಗೆ ರಾಮಾಯಣದ ಪ್ರತಿಕಾಂಡದಲ್ಲೂ ಶರಣಾಗತಿ ತತ್ತ್ವ ಬೆಳಗುತ್ತಿರುವುದರಿಂದ ರಾಮಾಯಣವನ್ನು ಶರಣಾಗತಿಶಾಸ್ತ್ರ ಎಂದು ಕರೆದಿರುವುದು ಉಚಿತವೂ ಸಹಜವೂ ಆಗಿದೆ. ಸರ್ವಪಾಪಗಳಿಂದಲೂ ಬಿಡುಗಡೆ ಹೊಂದಿ ಮೋಕ್ಷ ಸಾಮ್ರಾಜ್ಯವನ್ನು ಪಡೆಯಲು ಶರಣಾಗತಿಯಿಂದ ಸಾಧ್ಯ ಎಂದು ವಾಲ್ಮೀಕಿ ಋಷಿಗಳು ತಮ್ಮ ಆದಿಕಾವ್ಯ *ರಾಮಾಯಣ* ದಲ್ಲಿ ಘೋಷಿಸಿದ್ದಾರೆ.

### ಉಪಸಂಹಾರ:

ಹೀಗೆ ಶರಣಾಗತಿಯ ಆರು ಲಕ್ಷಣಗಳನ್ನೂ, ರಾಮಾಯಣದ ಪ್ರತಿಕಾಂಡದಲ್ಲೂ ಬರುವ ಶರಣಾಗತಿ ತತ್ತ್ವವನ್ನು ಸ್ಮರಿಸಿದೆವು. ಇನ್ನು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು,

**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।**
**ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥**

*(ಗೀತೆ, ೧೮.೬೬)*

'ಎಲ್ಲ ಧರ್ಮಗಳನ್ನು ಪರಿತ್ಯಜಿಸಿ ನನ್ನೊಬ್ಬನನ್ನೇ ಶರಣು ಹೊಂದು. ನಾನು ನಿನ್ನನ್ನು ಸರ್ವಪಾಪಗಳಿಂದಲೂ ಬಿಡಿಸುವೆನು. ಆದ್ದರಿಂದ ನೀನು ಶೋಕಿಸಬೇಡ' ಎಂದು ಅಭಯವನ್ನು ಕೊಡುತ್ತಾನೆ ಇದು ಗೀತೆಯ ಚರಮ ಶ್ಲೋಕ.

ಆದ್ದರಿಂದ ಅಲ್ಪಸ್ವಲ್ಪ ಫಲಗಳನ್ನು ಕೊಡುವ ಧರ್ಮ ಕರ್ಮಗಳನ್ನು ಬಿಟ್ಟು ಅನಂತ ಫಲವಾದ ಮೋಕ್ಷವನ್ನೇ ಕೊಡುವ ಈ